# JAIN COLLEGE

463/465, 18th Main Road, SS Royal, 80 Feet Road
Rajarajeshwari Nagar, Bangalore - 560 098

***Date:*** **SUBJECT: KANNADA**

***II PUC***
***MOCK- II***

***Timings Allowed: 3 Hrs.15 Mins***
***Total Marks: 100***

---

**I ಒಂದು ವಾಕ್ಯದಲ್ಲಿ ಉತ್ತರಿಸಿ.** **10X1=10**

1. ರಾವಣನಿಗೆ ಯಾವ ಬಗ್ಗೆ ವೈರಾಗ್ಯ ಮೂಡಿತು?
2. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು?
3. ಕುಳಿತು ಕೆಮ್ಮುವ ಪ್ರಾಣಿ ಯಾರು?
4. ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ?
5. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
6. ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ಯಾರು?
7. ಲೇಖಕಿಯ ಪತಿಗೆ ಕಿಡ್ನಿ ತೊಂದರೆಯಾದಾಗ ಯಾರನ್ನು ಭೇಟಿಯಾದರು?
8. ಕೊಡಲಿಯ ಆಕಾರ ಹೇಗಿತ್ತು?
9. ಮಾವುತನ ಹೆಸರೇನು?
10. ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?

**II ಅ. ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** ***4X2=8***

11. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?
12. ದ್ರೌಪದಿಯ ಮುಖವನ್ನು ಭೀಮ ಯಾವುದರಿಂದ ತೊಳೆದ?
13. ಯಾವುದಕ್ಕೆ ಸೆಳೆತವಿದೆ ಎಂದು ಕವಿ ಹೇಳುತ್ತಾರೆ?
14. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?
15. ಯಾರ ಕಂಬನಿಯನ್ನೊರೆಸಿ ಜೀಸಸ್ ದಿನನಿತ್ಯ ಶಿಲುಬೆ ಏರಿದ್ದಾನೆ?

**ಆ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3X2=6**

16. ಅನ್ಯ ಡಾಕ್ಟರುಗಳು ಬಸಲಿಂಗನ ಕಾಯಿಲೆ ಬಗ್ಗೆ ಏನೆಂದು ಪ್ರತಿಕ್ರಿಯಿಸಿದರು?
17. ಮಾದೇಗೌಡರು ಪಥ್ಯದ ವಿಚಾರವಾಗಿ ಹೊಂದಿದ್ದ ನಿಲುವು ಯಾವುದು?
18. ಕಲಾಂ ಅವರು ಬಂಡೆಗಳ ಬಸಿರಲ್ಲಿ ಕಂಡದ್ದೇನು?
19. ಮನೋರಮೆ ಕತೆ ಹೇಳೆಂದು ಕೇಳಲು ಕಾರಣವೇನು?

**ಇ. ಕೆಳಗಿನ ಪ್ರಶ್ನೆಗಳಲ್ಲಿ ಮೂರಕ್ಕೆ ಮಾತ್ರ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ.** **3X2=6**

20. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸು ಮುರುಸಿನಿಂದ ಏನು ಹೇಳಿದನು?
21. ಆನೆ ಮರ ತಳ್ಳುವ ಬಗೆಯನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ?
22. ಲೇಖಕರು ಕ್ಯಾಲಿಕ್ಯುಲೇಟರ್‌ನಲ್ಲಿ ಲೆಕ್ಕಹಾಕಿ ಜಬ್ಬಾರ್‌ಗೆ ಏನೆಂದು ಹೇಳಿದರು?
23. ಜುಬೇದಾ ಏನೆಂದು ಹೇಳಿದಳು?

**III ಅ. ಕೆಳಗಿನ ಯಾವುದಾದರು ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 2X3=6**

24.ಉದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ.

25.ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ.

26.ಭಾಳ ಮರುಗ್ಯಾಳ ಮನದಾಗ

**ಆ. ಕೆಳಗಿನ ಯಾವುದಾದರೂ <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3**

27.ಅವರು ನನ್ನಷ್ಟೆ ಒಳ್ಳೆಯ ಡಾಕ್ಟರು,ಏನು ತಪ್ಪು ತಿಳಿಯಬೇಡ.

28.ಬೆಳ್ಳಿಲೋಟಕ್ಕೆ ಇದೀಗ ಕುದುಪನಿಂದಾಗಿ ಜೀವ ಬಂದಂತಾಯ್ತು.

**ಇ. ಕೆಳಗಿನ ಯಾವುದಾದರು <u>ಒಂದು</u> ವಾಕ್ಯವನ್ನು ಕುರಿತು ಸಂದರ್ಭ ಸ್ವಾರಸ್ಯ ಬರೆಯಿರಿ. 1X3=3**

29.ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳಕೊ.

30.ಕೋವಿ ಸಿಕ್ಕಿದೆ,ಆದರೆ ಹೆಣ ಸಿಗಲಿಲ್ಲ.

**IV ಅ. ಕೆಳಗಿನ ಯಾವುದಾದರು <u>ಮೂರು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 3X4=12**

31.ಪ್ರಮದವನದಲ್ಲಿ ರಾವಣ–ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ:

32.ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

33.ಮಾನವ ಜೀವನದ ಸಾರ್ಥಕತೆ ಎಲ್ಲಿದೆಯೆಂದು ಕವಿ ಬೇಂದ್ರೆ ಹೇಳಿದ್ದಾರೆ?

34."ಒಂದು ಹೂ ಹೆಚ್ಚಿಗೆ ಇಡುತ್ತೀನಿ" ಕವಿತೆಯಲ್ಲಿ ವೃದ್ಧರ ತವಕ–ತಲ್ಲಣಗಳನ್ನು ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ?

**ಆ. ಕೆಳಗಿನ ಯಾವುದಾದರು ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8**

35.ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

36.ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?

37. ಹಳ್ಳಿಗರು ಹೊತ್ತನ್ನು ಹೇಗೆ ಕಳೆಯುತ್ತಾರೆ?ವಿವರಿಸಿ:

**ಇ. ಕೆಳಗಿನ ಯಾವುದಾದರು <u>ಎರಡು</u> ಪ್ರಶ್ನೆಗಳಿಗೆ ಐದಾರು ವಾಕ್ಯದಲ್ಲಿ ಉತ್ತರಿಸಿ. 2X4=8**

38.ಬೀದಿ ನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದು ಕೊಂಡಿದ್ದ ಕ್ರಮಗಳು ಯಾವುವು?

39.ಡ್ರೈವರನ ಸಾವಿನ ಸುದ್ಧಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

40.ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವೇನು?

**V ಅ. ಕೆಳಗಿನ ಯಾವುದಾದರು <u>ಒಂದು</u> ಪದ್ಯದ ಭಾವಾರ್ಥ ಬರೆಯಿರಿ. 1X5-5**

41.ಇರುವ ತನಕ ನಿಮ್ಮ ಸಾಮ್ರಾಜ್ಯ
ಆಗುತ್ತೇನೆ ಕ್ರೋಧ,ತಿಳಿಗೇಡಿತನಕ್ಕೆ ಆಜ್ಯ
ಬಂದೇ ತೀರುತ್ತದೆ ದೈವೀರಾಜ್ಯ
ಎನ್ನುವಂತೆ ಏರಿದ್ದಾನೆ ಶಿಲುಬೆ

ಅಥವಾ

42.ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ
ಕೆಲವಂ ಮಾಳ್ಪರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ
ಪಲವು ಪಳ್ಳ ಸಮುದ್ರವೈ ಹರಹರಾ ಶ್ರೀ ಚೆನ್ನಸೋಮೇಶ್ವರಾ

**VI ಭಾಷಾಭ್ಯಾಸ**

ಅ. ಕೆಳಗಿನ <u>ಆರು</u> ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **2X6=12**

43. ಪದಗಳ ಅರ್ಥ ಬರೆಯಿರಿ :ನಿಷ್ಕಲ,ತೃಷೆ

44. ಸಮಾನಾರ್ಥಗಳನ್ನು ಬರೆಯಿರಿ :ಪುಷ್ಪ,ಸೂರ್ಯ

45. ನಿಷೇಧಾರ್ಥಕಗಳನ್ನು ಬರೆಯಿರಿ :ಆಗದಾಗದು,ಕಾಣಬಾರದು.

46. ದ್ವಿರುಕ್ತಿಗಳನ್ನು ವ್ಯಾಕ್ಯಗಳಲ್ಲಿ ಉಪಯೋಗಿಸಿ :ಮೊಟ್ಟಮೊದಲು,ತುತ್ತತುದಿ

47. ತದ್ಭವ ಬರೆಯಿರಿ :ಪ್ರಣತಿ,ವೀರ

48. ಕಾಲಸೂಚಕಗಳನ್ನು ಬರೆಯಿರಿ :ಬಂದರು, ಹೋಗುವಳು

49. ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ :ಕಣ್ತೆರೆ,ಕತ್ತಿಮಸೆ

**ಇ. ಈ ಕೆಳಗಿನ ಯಾವುದಾದರು ಒಂದನ್ನು ಕುರಿತು ಪ್ರಬಂದ ಬರೆಯಿರಿ. 1X5=5**

50. ತಂತ್ರಜ್ಞಾನದಲ್ಲಿ ಕನ್ನಡ ಭಾಷೆಯ ಬಳಕೆ.

51. ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ

**ಈ. ಕೆಳಗಿನವುಗಳಲ್ಲಿ ಒಂದಕ್ಕೆ ಉತ್ತರಿಸಿ. 1X4=4**

52. ಬ್ಯಾಂಕಿನಲ್ಲಿ ನಿಮ್ಮ ಉಳಿತಾಯ ಖಾತೆಯ ಅಕೌಂಟ್ ತರೆಯಲು ವ್ಯವಸ್ಥಾಪಕರಿಗೊಂಡು ಪತ್ರ ರಚಿಸಿ.

ಅಥವಾ

53.ಪ್ರವಾಸದ ಅನುಭವವನ್ನು ಕುರಿತು ಗೆಳತಿ/ಗೆಳೆನಿಗೆ ಪತ್ರ ಬರೆಯಿರಿ:

**ಉ. ಒಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ. 1X4=4**

54.ಹೊಟ್ಟೆಗೆ ಹಿಟ್ಟಿಲ್ಲ,ಜುಟ್ಟಿಗೆ ಮಲ್ಲಿಗೆ ಹೂ.

55.ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ.

**************************